Regd. No M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 249 | ಶುಕ್ರವಾರ 30—5—47 | ಬಿಡಿ ಪ್ರತಿ 3 ಪೈ

ಪ್ರ. ಪ್ರ. ಸಭೆ ಶೀನೇ ದಿನ

ಒಂದು ಕಣ್ಣಿಗೆ ಸುಣ್ಣ ಮತ್ತೊಂದು ಕಣ್ಣಿಗೆ ಬೆಣ್ಣೆ

ಉದಾಧ್ಯಾಯರ ಪರಿಸ್ಥಿತಿ

——

ಪುಟ್ಟಣ್ಣಚಿಟ್ಟರ ಪುರಭವನ (ಬೆಂಗಳೂರು) ಮೇ 29—

(ನಮ್ಮ ವಿಶೇಷ ವರದಿಕಾರರಿಂದ)

ಮಸೂದಾ ಕಾನೂನುಗಳು ಈ ದಿವಸ ಚರ್ಚೆಗೆ ಬಂದಾಗ್ಗ, ಕಾಂಗ್ರೆಸ್ ಪಕ್ಷದ ಸದಸ್ಯರುಗಳು ನೆನ್ನೆಯ ದಿವಸ ತಿಳಿಸಿದ್ದಂತೆ, ಶ್ರೀ ಬಿ ಎಕ್. ಗವ್ಯಂವೆರ ನಾಯಕತ್ವದಲ್ಲಿ ಸಭಾ ಪರಿತ್ಯಾಗ ಮಾಡಿದರು.

12 ಗಂಟೆಯಲ್ಲಿ ಆರಂಭವಾದ ಈ ದಿವಸದ ಅಧಿವೇಶನದ ಅಧ್ಯಕ್ಷತೆಯನ್ನು ಅರೆಕ್ಕಣ ಡಾ|| ರಾಯ್ಕ ವಹಿಸಿಕೊಂಡನು. ಅನಂತರ ಅಕ್ಕಾಟ ಅಧ್ಯಕ್ಷತೆಯಲ್ಲಿ ಸಭೆ ಕಾರ್ಯ ಕಲಾಪಗಳು ಪಾಲಿಸಿ ತೊಡಗಿತು.

ಕಾತಿಯ ಪಂ|| ಗೋವಿಂದ ಮಾಳವೀಯರು ವಿಶೇಷ ಅತಿಥಿಗಳ ಪೀಠದಲ್ಲಿ ಮಂಡಿಸಿದ್ದರು. ಪ್ರೇಕ್ಷಕರ ಸಂಖ್ಯೆ ಸಾಮಾನ್ಯವಾಗಿದ್ದಿತು.

ಸದಸ್ಯರುಗಳ ಸೂಚನೆ ಮೇರೆ ದಿವಾಕ್ – ಅಧ್ಯಕ್ಷರು ಬಾಗಿಲುಗಳ ಮತ್ತು ಕಿಟಕಿಗಳ ಬಳಿ ಯಾರೂ ನಿಲ್ಲಕೂಡದು ಎಂಬುದಾಗಿ ಆಪ್ಪಣೆ ಇತ್ತರು.

ಪ್ರಶ್ನೋತ್ತರಗಳು

ಶ್ರೀ ತಿಮ್ಮೇಗೌಡರವರ ಪ್ರಶ್ನೆಗೆ, ಸರ್ಕಾರದ ಆದಾಯ ಮಂತ್ರಿ ಶ್ರೀ ಪಾಳೇಗಾರರು ಉತ್ತರಕೊಡುತ್ತಾ, ಸರ್ಕಾರದ ಪ್ರೌಢ ಶಾಲೆಗಳಲ್ಲಿ ಉಪಾಧ್ಯಾಯರು ಮಂತಾದವರಿಗೆ ಕೊಡುತ್ತಿರುವ ವೇತನಕ್ಕಿಂತಲೂ ಪೌರಸಭೆಯ ಉಪಾಧ್ಯಾಯರು ಮುಂತಾದವರಿಗೆ ವೇತನ ಕಡಿಮೆ ಕೊಡಲಾಗುತ್ತಿದೆ ಎಂದು ಹೇಳಿದರು. ಶ್ರೀ ಪಾಳೇಗಾರರು ಉಪ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ಪೌರಸಭೆಯವರು ನನಗೆ ಪತ್ರ ಬರೆದಲ್ಲಿ ನಾವು ಸಂಬಳ ಹೆಚ್ಚಿಸುತ್ತೇವೆ, ಸ್ಥಳೀಯ ಸಂಸ್ಥೆಗಳಲ್ಲಿ ಹಣ ಸಾಲದೆಂದು ಹೇಳುವುದು ಮತ್ತು ಹಣ ಸಹಾಯ ಮಾಡುತ್ತಿರಾ ಎಂದು ಪ್ರಶ್ನಿಸಿದರೆ ಅದಕ್ಕೆ ಏನೂ ಹೇಳಲು ಸಾಧ್ಯವಿಲ್ಲ. ವೇತನ ಸಮಿತಿ ವರದಿ ಪ್ರಕಾಶಿತವಾದ ನಂತರ ಸೊಡಬೇಕು- ಅಂತಹ ಉಪಾಧ್ಯಾಯರುಗಳು ಉಪ ಕಸಬುಗಳನ್ನು ಹೊಂದಿರುವ ವಿಷಯ ನಮಗೆ ಗೊತ್ತಿಲ್ಲ ಎಂದು ತಿಳಿಸಿದರು.

ಶ್ರೀ ಹನುಮಂತರಾಯಪ್ಪನವರ ಪ್ರಶ್ನೆಗೆ ಸರ್ಕಾರದ ವಿದ್ಯಾ ಕಾರ್ಯದರ್ಶಿ ಶ್ರೀ ತಿಪ್ಪೇರುದ್ರಯ್ಯನವರು ಉತ್ತರ ಕೊಡುತ್ತಾ, ದೇವನಹಳ್ಳಿ ತಾಲ್ಲೂಕಿನಲ್ಲಿ 84 ಪ್ರಾಥಮಿಕ ಶಾಲೆಗಳು, 4 ಪಕ್ಕಾ ಮಾಧ್ಯಮಿಕ ಶಾಲೆಗಳು ಮತ್ತು 5 ಹೆಡಿಸ ಮಾದರೀ ಮಾಧ್ಯಮಿಕ ಶಾಲೆಗಳು ಇವೆ ಎಂದು ತಿಳಿಸಿದರು. ಉಪ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ಅವುಗಳಿಗೆ ಭೂಪಟ ಮುಂತಾದ ದಸ್ತುಗಳನ್ನು ಕಳುಹಿಸುತ್ತೇನೆ ಎಂದರು.

ಶ್ರೀ ಯಿರೇಗೌಡರ ಪ್ರಶ್ನೆಗೆ ಶ್ರೀ ಕೆ. ಶ್ರೀನಿವಾಸನ್ನರು ಉತ್ತರ ಕೊಡುತ್ತಾ ಸಂಸ್ಥಾನದಲ್ಲಿ 15522 ಬೇಲುಗಳೆ ಗಿಂಣಿ ಮತ್ತು ವಿದ್ಯುಚ್ಛಕ್ತಿ ಮಗ್ಗದ ಬಟ್ಟೆಗಳು ತಯಾರಾಗಿವೆ ಎಂದು ತಿಳಿಸಿದರು. ಉಪ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ, ಐದು ಗಜ ಗಿರಣಿ ಬಟ್ಟೆ ಹಂಚಿಕೆ ನಿಯಮವನ್ನು ಆದಷ್ಟು ಪಾಲಿಸಿದ್ದೇವೆ ಎಂದರು.

ಸ್ಥಾಯಿ ಆಜ್ಞೆ

ಸ್ಥಾಯಿ ಆಜ್ಞೆಯ ಬಗ್ಗೆ ಶ್ರೀ ಗುಪ್ತರು ಮಾತನಾಡುತ್ತಾ ತಿದ್ದುಪಡಿ ಮಾಡುವ ಹಕ್ಕು ಪ್ರತಿನಿಧಿಗಳನ್ನು ಕೆಬಿಟ್ಟು ನುತ್ತಾರಿಗೂ ಇಲ್ಲ. ತಿದ್ದುಪಡಿ ಅಗತ್ಯವಿದ್ದರೆ 15 ದಿನಸಗಳ ಮುನ್ಸೂಚನೆ ಕೊಟ್ಟಿರಬೇಕು. ನಮಗಿರುವ ಹಕ್ಕು ಎಂದರೆ ಸ್ಥಾಯಿ ಆಜ್ಞೆಯನ್ನು ಸಿದ್ಧ ಮಾಡುವುದು ಮಾತ್ರವೇ ಎಂದರು.

ವಿಧಿ 10 ರ ಪ್ರಕಾರ ಅಧೀತಿ ತಿದ್ದುಪಡಿ ಮಾಡುವ ವಿಶೇಷ ಹಕ್ಕು ದಿವಾನ್ – ಅಧ್ಯಕ್ಷರಿಗೆ ಇಂದರು ಶ್ರೀ ರಾವ್-ರಾವ್

ಸ್ಥಾಯಿ ಆಜ್ಞೆ ತಿದ್ದುಪಡಿ ಬಗೆಗೆ ಶ್ರೀಮನ್ಮಾಹಾರಾಜರು ಪ್ರತಿನಿಧಿಗಳಿಗೆ ದಯಪಾಲಿಸುವ ಹಕ್ಕನ್ನು ಕಸಿಯಲು ದಿವಾಕ್ – ಅಧ್ಯಕ್ಷರಿಗೂ ಅಧಿಕಾರಿಗಳಿಗೂ ಆಗುವುದೇ ಇಲ್ಲ. ಆಷ್ಟು ನಮಗೆ ಹೊಳೆದಿದ್ದರೆ ಇದೇ ಸಭೆ ಸದಸ್ಯರೂ ಮಂತ್ರಿಗಳೂ ಆಗಿರುವ ಶ್ರೀ ಸಿದ್ಧಪ್ಪನವರಿಂದ ಮಂಡಿಸಬಹುದಿತ್ತು. ನ್ಯಾಯ ಕಾರ್ಯದರ್ಶಿಗಳು ತಿದ್ದುಪಡಿ ಮಾಡಿರುವುದು ಸರಿಯಲ್ಲ ಎಂದರು.

ಮಸೂದಾ ಕಾನೂನಿಗೆ ಅಂಗೀಕಾರ

ಸಂಬರಾಯಿಗಳು, ಕೆಲಸ ನಡೆಯುವ ವ್ಯವಸ್ಥೆಗಳು ಮತ್ತು ವಿವಿಧ ವಿಚಾರಗಳು ಇವುಗಳ ವಿಷಯಕ್ಕೆ ಸಂಬಂಧಪಟ್ಟ (ಹಂಗಾಮಿ ಅಧಿಕಾರಿಗಳ) ಮಸೂದಾ ಕಾನೂನು.

ಹತೋಟಿ ಕೋಡರೆ ಬೆಲೆ ಹೆಚ್ಚುವುದೆಂದು ಈ ಮಸೂದೆ ಪರ ಮಾತಾಡಿದವರು ಹೇಳಿದರು.

ಹತೋಟಿಯಿಂದ ರೈತಾಪಿ ಜನರಿಗೆ ಒಳಿತು ತೊಂದರೆಯಿದೆ ಎಂದು ಹೇಳಿ ಅನೇಕರು ಈ ಕಾನೂನನ್ನು ವಿರೋಧಿಸಿದರು.

ಅವಶ್ಯಕವಾದುದಕ್ಕೆ ಹತೋಟಿ ಇದ್ದು ಉಳಿದುದಕ್ಕೆ ಬೇಡ ಎಂಬ ಭೂಪಾಳಂ ತಿದ್ದುಪಡಿಯನ್ನು ಅನೇಕರು ಒಪ್ಪಿದರು.

ದೇವಾಲಯ ಪ್ರವೇಶ ಕಾನೂನು ಜೂನ್ 2 ರಿಂದ ಜಾರಿ !

ಮದರಾಸು ಮೇ 28 — ದೇವಾಲಯ ಪ್ರವೇಶ ಕಾನೂನು ವ್ಯಾಪ್ತ್ಯದಲ್ಲಿ ಜೂನ್ 2 ರಿಂದ ಜಾರಿಗೆ ಬರುವುದೆಂದು ಮದರಾಸು ಸರಕಾರ ಪ್ರಕಟಿಸಿದೆ. ತಾ|| 2 ರ ನಂತರ ಹರಿಜನರನ್ನು ದೇವಾಲಯ ಪ್ರವೇಶಕ್ಕೆ ಬಿಡ್ಡ ಕಟ್ಟಿದಲ್ಲಿ ಅದು ತಕ್ಸೀರಾಗುವುದು. ತಿರುಪತಿ ದೇವಾಲಯಕ್ಕೆ ಹರಿಜನ ಪ್ರವೇಶ ತಡೆದು ಹೈ ಕೋರ್ಟಿನವರು ಕೊಟ್ಟಿರುವ ಹುಕುಮ್ಮನ್ನು ಈ ಹೊಸ ಕಾನೂನನ್ನು ಅನುಸರಿಸಿ ವಾಪಸು ತೆಗೆದು ಕೊಳ್ಳಲು ಸರಕಾರವು ಅರ್ಜಿ ಹಾಕುವುದೆಂದು ಹೇಳಲಾಗಿದೆ.

ಇಂದಿನ ವರ್ತಮಾನ

ಅಮೃತಸರ ಮೆ 28 — ಇಲ್ಲಿಯ ಒಂದು ಕಡೆಯಲ್ಲಿನ ನಿವಾಸಿಗಳು ಭಾರಿ ಹೊಡೆದಾಟ ನಡೆಸಿ ಗುಂಡು ಮತ್ತು ಕಲ್ಲುಗಳನ್ನು ಧಾರಾಳವಾಗಿ ಉಪಯೋಗಿಸಿದರು.

ಂ ಂ

ಲಂಡನ್ ಮೆ 28 — ಗಾಂಧೀಜಿಯವರು ಕಳೆದುಕೊಂಡ ಗಡಿಯಾರಕ್ಕೆ ಪ್ರತಿಯಾಗಿ ಒಂದು ಬ್ರಿಟಿಷ್ ಕಂಪೆನಿಯು ಅವರಿಗೆ ಒಂದು ಗಡಿಯಾರವನ್ನು ಕಳುಹಿಸಿರುವರು.

ಂ ಂ

ಪಾಟ್ನಾ ಮೆ 28 — ಗಾಂಧಿ ಜಿನ್ನರ ವಿರುದ್ಧ ದುಗೆ ನಡೆಸಲೂ ಮತ್ತು ಬ್ರಿಟಿಷರ ವಿರುದ್ಧ ಕ್ರಾಂತಿ ನಡೆಸಲು ಕಾಕಾಸಾಹೇಬ್ ನಾಯಕ ಅಲಾಮ್ ಮಂತ್ರಿಕ್ಕರು ಹೇಳಿಕೆ ಹೊಂಡಿಸಿದ್ದಾರೆ

ಂ ಂ

ನವದೆಹಲಿ ಮೇ 29 — ಭಾರತದಲ್ಲಿ ಅಧಿಕಾರ ವರ್ಗಾಯಿಸುವ ಮಂತ್ರಿ ಮಂಡಲದಿಂದ ಒಪ್ಪಿತವಾದ ವೈಸರಾಯಿ ಯೋಜನೆಯು ಭಾರತ ಮುಖಂಡರಿಗೆ ತಿಳಿಸಲಾಗಿದೆ.

ಮತಗಣನೆಯಲ್ಲಿ ಮಸೂದಾ ಕಾನೂನು ಅಂಗೀಕಾರವಾಯಿತು.

ನಿಲುವಳಿ ಸೂಚನೆ

ತೋಗರೀಬೆಳೆ ಅಭಾವದ ಬಗ್ಗೆ ಶ್ರೀ ಶ್ಯಾಮರಾಜಯ್ಯಂಗಾರ್ಯರ ನಿಲುವಳಿ ಸೂಚನೆ ಚರ್ಚೆಯಾಗುತ್ತಿದೆ ಬೇಳೆ ಕಾಳಸಂತೆ ಮಾರಾಟವಾಗುತ್ತಿರುವುದಾಗಿಯೂ ಮುಚ್ಚಿಡಲ್ಪಡುತ್ತಿರುವುದೆಂದೂ ಅನೇಕ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಭಾಷಣಗಳು ಕಾವೇರುತ್ತಿದೆ ಅನ್ನ ಸಂಬಂಧದಲ್ಲಿ ಅಧಿಕಾರಿಗಳು ಅನುಪಯೋಗಿಗಳು ಎಂದು ಕೆಲವರ ವಾದ.

ಧ. ಯು. ಸ ಬುಲಿಟಿನ್

ಪ್ರಚಾರಕ—ರಾಜಾ ಎಸ್ ಗುರುರಾಜಾ ಚಾರ್ಯ. ಅಖಿಲ ಕರ್ನಾಟಕ ಸ್ನಾತಕರಿಗಳ ಸಂಘ, ಮಂತ್ರಾಲಯ.

ಧರ್ಮಯುದ್ಧಕ್ಕೆ ಸ್ತ್ರೀ ದಳ

ಇದೇತಾನೇ ಕಘಾಲೀ (ವಿಾರತ್) ದಾರಕೆ, ಹರಿದ್ವಾರ, ಭಗವಾನ್ಪುರ, ಸಹರಾಣ್ಪುರಗಳಿಂದ ಪ್ರವಾಸ ಮುಗಿಸಬಂದ ಧರ್ಮಸಂಘದ ನಾಯಕರಾದ ಶ್ರೀ ಶಿವಶರ್ಮ ಶಾಸ್ತ್ರಿಗಳು ಅಲ್ಲಲ್ಲಿ ಧರ್ಮ ವೀರರು ಮಾಡುತ್ತಿರುವ ಕಾರ್ಯಗಳಿಗೆ ತಮ್ಮ ಶ್ಲಾಘನೆ ಸೂಚಿಸಿರುವ ಹಾಗೂ ಅಲ್ಲಲ್ಲಿ ಜನರು ಧರ್ಮಯುದ್ಧಕ್ಕೆ ಜನ, ಧನ ಸಂಗ್ರಹವನ್ನು ಚೆನ್ನಾಗಿ ಮಾಡುತ್ತಿರುವುದಾಗಿಯೂ, ಹೃಷೀಕೇಶದಿಂದ ಶ್ರೀಮತಿ ಚಾದ್ರಾನೇನಿಯವರ ನಾಯಕತ್ವನಲ್ಲಿ ಒಂದು ಸ್ತ್ರೀ ದಳವು ಧರ್ಮಯುದ್ಧಕ್ಕಾಗಿ ಹೊರಟಿದೆಯೆಂದೂ ಹರಿದ್ವಾರದಿಂದ ವಿದ್ಯಾರ್ಥಿ ಅಧ್ಯಾಪಕರ ತಂಡ ಬರುವುದೆಂದೂ ತಿಳಿಸಿದರು.

ಮಹಾರಾಜರ ಸಂದೇಶ

ಅಳ್ವಾರ್ ಸಂಸ್ಥಾನದ ಶ್ರೀ ರಾಜಾ ಸ್ತಾಹೇಬ್ ಮಹಾರಾಜ ದುರ್ಜನಸಿಂಗ್ ಜೀ (ಜವಾಲಿ) ಯವರು 'ಕ್ಷತ್ರಿಯರು ಅದರಲ್ಲೂ ಹಿಂದೂಗಳು ತಮ್ಮ ಮತ ಮತ್ತು ಧರ್ಮವನ್ನು ಉಳಿಸುವುದು ಅವರ ಪವಿತ್ರ ಕರ್ತವ್ಯವಾಗಿದೆ. ಆದುದರಿಂದ ಯಾರೇ ಆಗಲೀ ಈ ಧರ್ಮಯುದ್ಧದ ಸುಸಂಧಿಯನ್ನು ಕಳೆದುಕೊಳ್ಳಬಾರದು' ಎಂದು ಹೇಳಿಕೆಹೊರಡಿಸಿದ್ದಾರೆ.

ಸುವಿಖ್ಯಾತ 'ಕಲ್ಯಾಣ್' ಮಾಸಪತ್ರಿಕಾ ಸಂಪಾದಕರಾದ ಶ್ರೀ ಭಾಯ್ ಹನುಮಾನ್ ಪಂಡಿತ್ ಪೋದ್ದಾರ್‌ರವರು ತಾವು ಗುಣಹೊಂದಿದೊಡನೆ ಧರ್ಮಯುದ್ಧಕ್ಕೆ ದೆಹಲಿಗೆ ಬರುವುದಾಗಿ ತಂತೀ ವಾರ್ತೆ ತಿಳಿಸಿದ್ದಾರೆ. ಮತ್ತು ಅವರು ಹೇಳಿದ್ದೇನೆಂದರೆ— 'ಹಿಂದೂ ಮತದ ಉದ್ಧಾರ ವಾಗಬೇಕಾಗಿದ್ದಲ್ಲಿ ಎಲ್ಲರೂ (ಹಿಂದೂಗಳು) ಧರ್ಮಯುದ್ಧದಲ್ಲಿ ಭಾಗವಹಿಸಲೇ ಬೇಕು' ಎಂದು ತಿಳಿಸಿದ್ದಾರೆ.

—

ವಿವಾಹ ಮಹೋತ್ಸವಗಳು

(ಮೈಸೂರು ತಾ॥ 29–5–47)

ಮೈಸೂರು ಜಮಖೀ ವರ್ತಕ ಸಂಘದ ಅ॥ ಸೆಕ್ರೆಟರಿಗಳಾದ ಶ್ರೀ ಎಸ್. ತ್ರೀನಿವಾಸಂರವರು ತಮ್ಮ ಪುತ್ರಿ ಚಿ॥ ಸೌ॥ ಪದ್ಮಾವರನ್ನು ಶ್ರೀ ಗುಂಡಪ್ಪನವರ ಪುತ್ರ ಚಿ॥ ಎಸ್. ಜಿ. ಕೇಶವಮೂರ್ತಿ ಬಿ. ಎ, ರವರಿಗೆ ಕೊಟ್ಟು ವಿವಾಹ ಮಹೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿದರು.

ಮೈಸೂರು ಪೌರಸಭಾ ಸದಸ್ಯರಾದ ಶ್ರೀ ಟಿ. ವೆಂಕಟರಮಣಯ್ಯನವರು ತಮ್ಮ ಸೋದರ ಸೊಸೆ ಚಿ॥ ಸೌ॥ ಕಮಲರನ್ನು ಶ್ರೀ ಕಂಭಯ್ಯನವರ ಸುಗ ಚಿ॥ ರಾಮಚಂದ್ರರಿಗೆ ಕೊಟ್ಟು ವಿವಾಹ ಮಹೋತ್ಸವವನ್ನು ವೈಭವದಿಂದ ನೆರವೇರಿಸಿದರು.

ಶ್ರೀ ಪಾರ್ಥಸಾರಥಿರಾಯಣ ಪಂಡಿತರು ತಮ್ಮ ಕುಮಾರಿ ಚಿ॥ ಸೌ॥ ಅಲಕ ಗಂಗಾತರನ್ನು ಶ್ರೀ ಎಸ್. ಶ್ರೀಕಂಠಯ್ಯನವರ ಕುಮಾರ ಚಿ॥ ಬಿ. ಎಸ್. ಕೃಷ್ಣಮೂರ್ತಿ, ಬಿ ಎಸ್‌ಸಿ. ರವರಿಗೆ ಕೊಟ್ಟು ವಿವಾಹಮಹೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿದರು.

.... ವುಡ್‌ಲ್ಯಾಂಡ್ಸ್ ಮೈಸೂರು ...

ತಾ॥ 25-5-47 ರಿಂದ ಕಿಕ್ಕಿರಿದ ನೇ 4 ವಾರ

ನಾವು ಇಬ್ಬರು

(ತಮಿಳು)

ತಾರಾಗಣ : * ಟಿ.ಆರ್. ಮಹಾಲಿಂಗಂ * ಬಿ.ಆರ್. ಪಂತಲು * ಸಾರಂಗಪಾಣಿ * ಟಿ. ಯಂ. ಜಯಲಕ್ಷ್ಮಿ * ಬೇಬಿ ಕಮಲ

ಪ್ರತಿದಿನ 2 ಆಟಗಳು

ಶನಿವಾರ ಮತ್ತು ಭಾನುವಾರಗಳಲ್ಲಿ ೩ - ೩೦ ಕ್ಕೆ ಮ್ಯಾಟ್ನಿ ಉಂಟು

ಅಕ್ಕರ ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕಾದ ವಿಳಾಸ—

ಸತ್ಯವಾದಿ ಆಫೀಸ್, ಮೈಸೂರು

For Quality Printing

L. N. Press

Sriramp st, MYSORE

'ಶಕ್ತಿಸುಧಾ' ಸೇವಿಸಿ ಶಕ್ತಿಯನ್ನು ಹೊಂದಿ

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯೂ ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮಂತ್ರಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ.

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

At Opera

6 ನೇ ವಾರ

ಟಿ. ಎಸ್. ಬಾಲಯ್ಯ, ತಪಮಣಿದೇವಿ, ಮಾಲತಿ, ರಾಮಚಂದ್ರ ನಟಿಸಿರುವ

ರಾಜಕುಮಾರಿ

(ತಮಿಳು)

ಸತ್ಯವಾದಿ

ದಿನಪತ್ರಿಕೆ. ತಿಂಗಳಿಗೆ ಆರಾಣೆ

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಸಂಸ್ಥಳಕ್ಕೆ ಅಂಚೆವೆಚ್ಚಸೇರಿ 1–12–0

Edited, Printed and Published by M. S Krishna Rao at the Satyavadi Press Chamaraj Agrahar, Mysore.